ಶ್ರೀ ಸಿದ್ದರಾಮಯ್ಯ: ಆ ಫೈಲ್ ಬಂದಿದೆ, ನಾನು ಅದನ್ನು ಮಾಡಿಕೊಡುತ್ತೇನೆ.

ಶ್ರೀ ಎನ್.ಯೋಗೀಶ್ ಭಟ್: ಬರುವ 8ನೇ ತಾರೀಖು ಮಂಗಳೂರಿನಲ್ಲಿ 200ನೇ ವರ್ಷದ ಜಿಲ್ಲಾ ಮಟ್ಟದ ಸೆಲಬರೇಷನ್ ನಡೆಯುತ್ತಿದೆ. ಆ ಸಂದರ್ಭದಲ್ಲಿ ತಾವು ಅಲ್ಲಿಗೆ ಬರುವುದರಲ್ಲಿದ್ದೀರಿ. ತಾವು ಬರುವಾಗ ಅಲ್ಲಿ ಶಂಕುಸ್ಥಾಪನೆಯನ್ನು ಮಾಡುವವರಿದ್ದೀರಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಯೋಗೀಶ್‌ಭಟ್‌ರೆ, ನಾನು ಮಾಡಿಕೊಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಬ್ಯಾಲೆನ್ಸ್ ಅಮೌಂಟನ್ನು ಕೊಟ್ಟರೆ ಅನುಕೂಲವಾಗುತ್ತದೆ.

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೆ, ಮಾನ್ಯ ಉಪಮುಖ್ಯ ಮಂತ್ರಿಗಳು ಪಾಸಿಟೀವ್ ಆಗಿ ಕೊಡುತ್ತೇನೆಂದು ಹೇಳಿದ್ದಾರೆ. ನಿಮಗೆ ಮಾತನಾಡುವುದಕ್ಕೆ ಚಾನ್ಸ್ ಕೊಡುವುದಿಲ್ಲ, ಅವರೇ ಕೊಟ್ಟುಬಿಡುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಕೇಂದ್ರಸರ್ಕಾರದವರು ಈಗಾಗಲೇ 125 ಕೋಟಿ ರೂಗಳನ್ನು ಕೊಡುವ ಬಗ್ಗೆ ಅವರ ಸಂಪರ್ಕವನ್ನು ಮಾಡಿದ್ದಾರೆ.

ಅಧ್ಯಕ್ಷರು: ನಾನು ಹೇಳಿದ್ದನ್ನು ತಾವು ಕೇಳಿಸಿ ಕೊಳ್ಳಲಿಲ್ಲವೇ? ನಿಮಗೆ ಚಾನ್ಸ್‌ನ್ನು ಕೊಡುವುದಿಲ್ಲ, ಅವರು ಕೊಟ್ಟುಬಿಡುತ್ತಾರೆ.

ಶ್ರೀ ಸಿದ್ದರಾಮಯ್ಯ: ಕೊಡುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಸಿದ್ದರಾಮಯ್ಯನವರೆ, ಮೈಸೂರಿಗೆ ಬೇಕಾದರೆ ಮಾಡಿಸಿಕೊಳ್ಳಿ. ಕೇಂದ್ರ ಸರ್ಕಾರದ ಹಣವನ್ನು ಕೊಡುವುದಕ್ಕೆ ಸಿದ್ದವಾಗಿದೆ. ಈ ವಿಷಯದ ಬಗ್ಗೆ ತಾವು ಮುಂದೆ ಬರುತ್ತಿಲ್ಲ, ಏಕೋ ಏನೋ ಗೊತ್ತಿಲ್ಲ.

ಶ್ರೀ ಸಿದ್ದರಾಮಯ್ಯ: ಅವರು ಬರಲಿ, ನಾವು ಜಮೀನನ್ನು ಕೊಡುತ್ತೇವೆ.

ಕುಶಾಲನಗರ ಕುಡಿಯುವ ನೀರಿನ ಯೋಜನೆ.

313(2124)

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್ (ಸೋಮವಾರಪೇಟೆ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಶಾಲನಗರ ಕುಡಿಯುವ ನೀರಿನ ಎರಡನೇ ಹಂತದ ಕೆಲಸವನ್ನು ಕಳೆದ ಏಪ್ರಿಲ್‌ನಲ್ಲಿ ಕೈಗೆತ್ತಿಕೊಳ್ಳಲಾಗುವುದೆಂದು ಸದನದಲ್ಲಿ ಆಶ್ವಾಸನೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಯೋಜನೆಯ ಕಾಮಗಾರಿಯನ್ನು ಈವರೆಗೂ ಕೈಗೆತ್ತಿಕೊಳ್ಳದಿರುವುದಕ್ಕೆ ಕಾರಣಗಳೇನು?

ಶ್ರೀ ಎಂ.ಎಸ್.ಪಾಟೀಲ್ (ನಗರಾಭಿವೃದ್ಧಿ ಸಚಿವರು):

ಅ) ಬಂದಿದೆ.

ಆ) ಕರ್ನಾಟಕ ಜಲ ಮಂಡಲಿಯು ಸಲ್ಲಿಸಲಾಗಿದ್ದ ರೂ.65 ಲಕ್ಷ ಮೊತ್ತದ ಅಂದಾಜನ್ನು ಸರ್ಕಾರವು ಮಿತಿಗೊಳಿಸಿ ರೂ.52.24ಲಕ್ಷಗಳಿಗೆ ಮಂಜೂರಾತಿ ನೀಡಿರುತ್ತದೆ. ಸರ್ಕಾರ ನೀಡಿರುವ ಭರವಸೆಯಂತೆ, ಈಗಾಗಲೇ ಟೆಂಡರ್ ಕರೆದು ಗುತ್ತಿಗೆ ದಾರರನ್ನು ನೇಮಿಸಲಾಗಿದ್ದು ಕಾಮಗಾರಿಯನ್ನು ಪ್ರಾರಂಭಿಸಲಾಗತ್ತಿದೆ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೆ, ಕಳೆದ ಸಾರಿ ಈ ಸದನದಲ್ಲಿ ಏಪ್ರಿಲ್- 30ನೇ ತಾರೀಖಿನೊಳಗಾಗಿ ಈ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಉತ್ತರವನ್ನು ಕೊಟ್ಟಿದ್ದರು. ಈ ಸಾರಿ ಉತ್ತರದಲ್ಲಿ ಈ ಯೋಜನೆಯ ಕಾಮಗಾರಿಯನ್ನು ಈವರೆಗೂ ಕೈಗೆತ್ತಿಕೊಳ್ಳದಿರುವುದಕ್ಕೆ ಕಾರಣವೇನು ಎಂದು ಕೇಳಿದಾಗ 65 ಲಕ್ಷ ರೂಪಾಯಿಗಳ ಅಂದಾಜು ಖರ್ಚಾಗುತ್ತಿತ್ತು; ಅದನ್ನು ಮಿತಿಗೊಳಿಸಿ 52.24 ಲಕ್ಷ ರೂಪಾಯಿ ಮಂಜೂರಾತಿ ನೀಡಿದ್ದೇವೆಂದು ಉತ್ತರವನ್ನು ಕೊಟ್ಟಿದ್ದಾರೆ. 12.76 ಲಕ್ಷ ರೂಪಾಯಿಗಳನ್ನು ಕಡಿಮೆ ಮಾಡಿದ್ದಾರೆ. ಹಾಗಾದರೆ ಯಾವ ಯಾವ ಕೆಲಸವನ್ನು ಕೈಬಿಡಲಾಗಿದೆ, ಮತ್ತು ಯಾವಾಗ ಕೆಲಸವನ್ನು ಪ್ರಾರಂಭ ಮಾಡುತ್ತೀರೆಂದು ನಿರ್ದಿಷ್ಟವಾಗಿ ತಾವು ಹೇಳಬೇಕೆಂದು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ಎಂ.ಎಸ್.ಪಾಟೀಲ್(ನಗರಾಭಿವೃದ್ಧಿ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಹಿಂದೆ ನಾನು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಟೆಂಡರನ್ನು ಕರೆದು ಕೆಲಸವನ್ನು ಪ್ರಾರಂಭ ಮಾಡುತ್ತೇನೆಂದು ಹೇಳಿದ್ದೆ. ಈಗಾಗಲೇ ಟೆಂಡರನ್ನು ಕರೆಯಲಾಗಿದೆ. ಟೆಂಡರನ್ನು ಕರೆದು ಈಗಾಗಲೇ ಏಜೆನ್ಸಿಯನ್ನು ಫಿಕ್ಸ್ ಮಾಡಿದ್ದೇವೆ. ಈಗ ಈ ಕೆಲಸ ಪ್ರಾರಂಭ ಮಾಡುವ ಹಂತದಲ್ಲಿದೆ. ಹಣಕಾಸಿನ ಪರಿಸ್ಥಿತಿಯಿಂದ ಕೆಲವೊಂದು ವ್ಯತ್ಯಾಸಗಳು ಆಗಿದೆ. ಈಗ ಅವರಿಗೆ ಬೇಕಾಗಿರುವಂಥದ್ದು ನೀರಿನ ಸೌಲಭ್ಯ. ಅದನ್ನು ಒದಗಿಸುವುದಕ್ಕೆ ಸರ್ಕಾರ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತದೆ. ಆ ಕೆಲಸವನ್ನು ಮಾಡಿಕೊಡುತ್ತೇನೆ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಅಲ್ಲಿ 12 ಲಕ್ಷದ 76 ಸಾವಿರ ರೂಪಯಿಗಳನ್ನು ಕಡಿಮೆ ಮಾಡಿದ್ದಾರೆ. ಯಾವ ಕಾಮಾಗಾರಿಯನ್ನು ಕೈಬಿಡಲಾಗಿದೆ ಎಂಬುದನ್ನು ಹೇಳಿಲ್ಲ.

ಅಧ್ಯಕ್ಷರು: ನಿಮ್ಮ ಕೆಲಸವನ್ನು ಪೂರ್ಣವಾಗಿ ಮಾಡಿಕೊಡುತ್ತೇನೆಂದು ಪರ್‌ಫೆಕ್ಟ್ ಆಗಿ ಉತ್ತರವನ್ನು ಸಚಿವರು ಕೊಟ್ಟಿದ್ದಾರೆ. ಅವರು ಇತ್ತೀಚೆಗೆ ಏನು ಮಾತನಾಡಿದರೂ ಕಡ್ಡಿ ಮುರಿದ ಹಾಗೆ ಮಾತನಾಡುತ್ತಾರೆ.

ಶ್ರೀ ಎಂ.ಎಸ್.ಪಾಟೀಲ್: ಈಗಾಗಲೇ ಎಸ್ಟಿಮೇಟ್‌ನ್ನು ಮಾಡಿರುತ್ತೇವೆ, ಅದಕ್ಕೆ ತಗಲುವ ವೆಚ್ಚ ಕಡಿಮೆಯಾದರೂ ಕೊಡಬೇಕಾಗುತ್ತದೆ, ಹೆಚ್ಚಾದರೂ ಕೊಡಬೇಕಾಗುತ್ತದೆ.

ಗುಲ್ಬರ್ಗ ಜಿಲ್ಲೆಯ ಚಿಂಚನಸೂರು ಗ್ರಾಮದಲ್ಲಿ ಕೆ.ಹೆಚ್.ಡಿ.ಸಿ. ನೇಕಾರರಿಗೆ ವಾಸಿಸಲು ಮನೆಗಳ ನಿರ್ಮಾಣ

314(1730)

ಶ್ರೀ ರೇವುನಾಯ್ಕ ಬೆಳಮಗಿ, (ಕಮಲಪುರ): ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗ ಜಿಲ್ಲೆಯ 'ಚಿಂಚನಸೂರು ಗ್ರಾಮದಲ್ಲಿ ಕೆಹೆಚ್‌ಡಿಸಿ ನಿಗಮದಲ್ಲಿ ಸುಮಾರು 15 ವರ್ಷಗಳಿಂದ ಕೆಲಸ ಮಾಡುತ್ತಿರುವ ಬಡ ನೇಕಾರರಿಗೆ ವಾಸಿಸಲು ಮನೆಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಮನೆಗಳನ್ನು ನಿರ್ಮಿಸಿಕೊಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಸಿ.ಎಂ.ಉದಾಸಿ (ಜವಳಿ ಸಚಿವರು):

ಅ) ಹೌದು.

ಆ) ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಅರ್ಹ ನೇಕಾರರಿಗೆ ಮನೆ ಒದಗಿಸಲು ಕ್ರಮ ಕೈಗೊಳ್ಳಲಾಗುವುದು.